**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಓ ಎಸ್:ನಂಬರ್. 54/2019 | ಪಿ.ಡಬ್ಲ್ಯೂ-2 | |
|---|---|---|

ಸಾಕ್ಷಿದಾರರ ಹೆಸರು : ಎಂ.ವಿ ಶಂಕರನಾಗ್

ತಂದೆಯ ಹೆಸರು : ವೆಂಕಟೇಶ,

ವಯಸ್ಸು : 38 ವರ್ಷ

ಉದ್ಯೋಗ : ಪತ್ರ ಬರಹಗಾರರು.

ವಾಸ ಸ್ಥಳ : ಕೆ.ಆರ್ ಪೇಟೆ.

ದಿನಾಂಕಃ 18.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ.ಕೆ ಆರ್.ಎಂ ವಕೀಲರವರಿಂದ ವಾದಿಗಳ ಪರವಾಗಿ

ನಾನು ಕಳೆದ 2009 ನೇ ಇಸವಿಯಿಂದ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಲೈಸೆನ್ಸ್ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ದಿನಾಂಕ 25.04.2018 ರಂದು ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿ ನೀಡಿದ ಮಾಹಿತಿಯ ಮೇರೆಗೆ ನಾನು ಖುಷ್ಕಿ ಜಮೀನಿನ ಶುದ್ಧ ಕ್ರಯ ಪತ್ರದ ಒಪ್ಪಂದದ ಕರಾರು ಪತ್ರವನ್ನು ತಯಾರು ಮಾಡಿರುತ್ತೇನೆ. ಆ ಸಮಯದಲ್ಲಿ ಸದರಿ ಪತ್ರಕ್ಕೆ ವಾದಿ ಪ್ರತಿವಾದಿಗಳು, ಸಾಕ್ಷಿದಾರರಾಗಿ ವೆಂಕಟೇಶ ಮತ್ತು ಶೇಖರೇಗೌಡರವರು ಸಹಿ ಮಾಡಿರುತ್ತಾರೆ. ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಐ ಎಂದು ಗುರುತಿಸಲಾಗಿರುತ್ತದೆ. ಪ್ರತಿವಾದಿಗಳು ಮತ್ತು ಸಾಕ್ಷಿದಾರರು ವಾದಿಯಿಂದ ಪ್ರತಿವಾದಿಗಳು ರೂ 5,50,000/- ರೂಪಾಯಿಗಳನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ.

ಪಾಟೀ ಸವಾಲು :- ಪ್ರತಿವಾದಿಗಳನ್ನು ಕೂಗಿ ಕರೆಸಲಾಗಿ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.